ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **267/2016**

| | | |
|---|---|---|
| ಸಾಕ್ಷಿಯ ಹೆಸರುಃ | ಸಿದ್ದಯ್ಯಸ್ವಾಮಿ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಬಸಯ್ಯಸ್ವಾಮಿ | ಚಾಸಾಃ 3 |
| ವಯಸ್ಸು ಃ | 45 ವರ್ಷ | ದಿಃ 30-01-2026 |
| ಉದ್ಯೋಗಃ | ವ್ಯಾಪಾರ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಕಾಳಬೆಳಗುಂದಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನನಗೆ ಚಾಸಾಃ 2 ರವರ ಪರಿಚಯ ಇದೆ. ಚಾಸಾಃ 2 ರವರು ಮರಣ ಹೊಂದಿರುತ್ತಾರೆ. ನಾನು ಆರೋಪಿತರನ್ನು ನೋಡಿರುವುದಿಲ್ಲ. ಸನಃ 2016 ರಲ್ಲಿ ನಾನು ಬೆ. 11.00 ಗಂಟೆಗೆ ನೀಲಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಚಾಸಾಃ 1 ಮತ್ತು 5 ರವರ ಮನೆಯ ಮುಂದೆ ಸಾಮಾನುಗಳು ಬಿದ್ದಿರುತ್ತವೆ. ಸದರಿ ಮನೆಯ ಮುಂದೆ ರಾಡು, ಕಲ್ಲು, ಹಂಚು ಬಿದ್ದಿರುತ್ತವೆ. ನಾವು ಹೋದ ಮೇಲೆ ಪೊಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ನನಗೆ ಪಂಚನಾಮೆ ಸಾಕ್ಷಿದಾರ ಆಗಲು ಕೇಳಿರುತ್ತಾರೆ ಆದ್ದರಿಂದ ಸಾಕ್ಷಿದಾರ ಆಗಿರುತ್ತೇನೆ. ನಾನು ಸಹಿ ಮಾಡಿರುತ್ತೇನೆ. ಚಾಸಾಃ 1 ಮತ್ತು 5 ರವರ ಮನೆಯ ಮುಂದೆ ಪಂಚನಾಮೆ ಆಗಿರುತ್ತದೆ. ಸಾಕ್ಷಿಗೆ ಎರಡು ದಾಖಲಾತಿಯನಮ್ಮು ತೋರಿಸಲಾಗಿ ಅದು ಗುನ್ಹೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಮತ್ತು ನಿಪಿ-3 ಎಂದು, ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿಕೊಂಡಿರುತ್ತಾನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರು ಶ್ರೀ</u> <u>ಜಿ. ಎಸ್. ಎನ್ ಇವರಿಂದ</u>

1. ನನ್ನ ಮೂಲ ಗ್ರಾಮ ಹಲಕಟ್ಟಿ. ನಾನು ನನ್ನ ಹೆಂಡತಿಯ ಮನೆ ಕಾಳಬೆಳಗುಂದಿ ಗ್ರಾಮದಲ್ಲಿದ್ದು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿ. ಚಾಸಾಃ 1, 4, 5 ರವರು ನನ್ನ ಸಂಬಂಧಿಕರು ಎಂದರೆ ಸರಿ. ಆರೋಪಿತರು ಮತ್ತು ಚಾಸಾಃ 1, 4, 5 ರವರ ನಡುವೆ ಹಣಮಂತ

ಗುಡಿಯ ಜಾಗದ ಸಲುವಾಗಿ ತಕರಾರು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ಸಹಿ ಪೊಲಿಸ ಠಾಣೆಯಲ್ಲಿ ಹಾಕಿರುತ್ತೀರಾ? ಎಂದರೆ ಸಾಕ್ಷಿಯು ಊರಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸ್ವತಃ ನೋಡಲು ಹೋಗಿರುತ್ತೇನೆ ಯಾರೂ ಕರೆದಿರುವುದಿಲ್ಲ. ಪಂಚನಾಮೆ ಕಾಲಕ್ಕೆ ನಾನು, ಪೊಲಿಸರು ಮತ್ತು ಚಾಸಾಃ 2 ರವರು ಇದ್ದೇವು. ಸದರಿ ನಿಪಿ-2 ರಲ್ಲಿ ಮತ್ತು ನಿಪಿ-3 ರಲ್ಲಿ ಬರೆದಿರುವುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಪೊಲಿಸರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-3 ಮತ್ತು ನಿಪಿ-4 ಯಾರ ಹೇಳಿಕೆಯ ಮೇಲೆ ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಘಟನಾ ಸ್ಥಳದ ಚಕಬಂದಿ ಹೇಳಲು ಬರುವುದಿಲ್ಲ. ಸದರಿ ಪೊಲಿಸರು ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ನಮ್ಮ ಸಮಕ್ಷಮದಲ್ಲಿ ಮು. ಮಾ. ಜಪ್ತಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು. ಮಾ. ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸದರಿ ಚಾಸಾಃ 1 ಮತ್ತು ಚಾಸಾಃ 4 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ